

ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ಕೈ,
ಬಟ್ಟಲು ತೊಳೆಯಲು ಮಳೆನೀರು




ಶಾಲೆಯಲ್ಲಿ ಮಳೆಕೊಯ್ಲಿನ ಫಲಕ : ಊರಿಗೆಲ್ಲಾ ಮಳೆಕೊಯ್ಲು ಹಬ್ಬಿಸುವ ತವಕ

ಮಳೆಕೊಯ್ಲಿಗೆ ಮಾರ್ಗದರ್ಶನ ಕೊಟ್ಟಿದ್ದಾರೆ. ಇಂಥ ಮನೆಗಳ ಸಂಖ್ಯೆ 30ರ ಎಡಬಲದಲ್ಲಂತೂ ಇರಬಹುದು.

'ನಾವು ಅಧ್ಯಾಪಕರಲ್ಲಿ ಹೆಚ್ಚಿನವರೂ ಮನೆಗಳಲ್ಲಿ ಮಳೆನೀರ ಸಂಗ್ರಹ ಮಾಡಿ ಖುಷಿಯಲ್ಲಿದ್ದೇವೆ' ಎನ್ನುತ್ತಾರೆ ಸಿ.ನಿರ್ಮಲಾ. 'ಇಲ್ಲಿ ಹೆಚ್ಚಿನ ಮನೆಗಳಲ್ಲೂ ನೀರಿನ ಚಿಕ್ಕ ತೊಟ್ಟಿ ಇದ್ದೇ ಇರುತ್ತದೆ. ಟ್ರಾಕ್ಟರ್ ನೀರು ತುಂಬಿಕೊಳ್ಳಲು. ನಮಗಿರುವ ಕೆಲಸ ಎಂದರೆ ತೊಟ್ಟಿಗೆ ಆಕಾಶದ ಸಂಪರ್ಕ ಒದಗಿಸಿ, ಮಳೆನೀರಿನ ಶೋಧನೆ, ಮತ್ತು ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದು ಮಾತ್ರ', ಲಕ್ಷ್ಮೀನಾರಾಯಣ ಬೊಟ್ಟು ಮಾಡುತ್ತಾರೆ. ಎಲ್ಲೆಲ್ಲಿಂದಲೋ ತರುವ ನೀರಿಗೆ ಈ ನಗರಿಗರು ಭಾರೀ ಬೆಲೆ ಕಕ್ಕುತ್ತಿದ್ದಾರೆ. ಬದಲಿಗೆ, ತಂತಮ್ಮ ತೊಟ್ಟಿಗಳಿಗೆ ಮಳೆಯನ್ನು ಇಳಿಸುವ ಮನಸ್ಸು ಮಾಡಿದರೆ ಸಾಕು. ದೊಡ್ಡಬಳ್ಳಾಪುರವೂ ದೊಡ್ಡ ನೀರನೆಮ್ಮದಿ ಗಳಿಸಿಕೊಳ್ಳಬಹುದು.

'ಮೊತ್ತಮೊದಲು ಬಹಳ ಖುಷಿ ಆಯಿತು. ಸ್ವಲ್ಪ ಹೊತ್ತಿನಲ್ಲೇ ಅದು ಕೊರಗಿಗೆ ತಿರುಗಿತು'. ಏಳು ವರ್ಷಗಳ ಹಿಂದಿನ ಕತೆ ಸುರು ಮಾಡುತ್ತಾರೆ ಟಿ. ಮಲ್ಲೇಶಪ್ಪ. 2012ರಲ್ಲಿ ಅವರು ಆಗಷ್ಟೇ ಹೆಬ್ಬಳ್ಳಿ ಹಿರಿಯ ಪ್ರಾಥಮಿಕ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಂದಿದ್ದರು. ಈ ಶಾಲೆ ಆರು ವರ್ಷ ಹಿಂದೆಯೇ ಮಳೆನೀರ ತಿಜೋರಿ ಮಾಡಿಕೊಂಡಿತ್ತು.

ಹೆಬ್ಬಳ್ಳಿ ಗ್ರಾಮ ಇರುವುದು ಒಣ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿ. ನೀರಿಗೆ ತುಂಬ ಸಮಸ್ಯೆ. ಶಾಲೆಯಲ್ಲಿ ಮಳೆಕೊಯ್ಲಿಗೆ ಉತ್ಸಾಹ ವಹಿಸಿದ್ದು ಜಲತಜ್ಞ ಡಾ. ಎನ್.ಜೆ. ದೇವರಾಜ್ ರೆಡ್ಡಿ. ಆರ್ಥಿಕ ನೆರವು 'ಅರ್ಘ್ಯಂ' ಫೌಂಡೇಶನಿನದು, ತಾಂತ್ರಿಕ ಸಲಹೆ ದೇವರಾಜರದು. ನಿರ್ಮಾಣ ಅವರದೇ, ಜಿಯೋ ಮಳೆನೀರು ಮಂಡಳಿಯದ್ದು. ಭೂಗತ ಟಾಂಕಿ, ನೀರ ತಿಜೋರಿಯ ಸಾಮರ್ಥ್ಯ 16 ಸಾವಿರ ಲೀಟರ್.

'ಇಲ್ಲಿ ಒಂದರಿಂದ ಏಳರವರೆಗೆ ತರಗತಿಗಳಿವೆ. ವಿದ್ಯಾರ್ಥಿಗಳ ಸಂಖ್ಯೆ ಕೇವಲ 42. ಹದಿಮೂರು ವರ್ಷಗಳಿಂದ ಕುಡಿಯಲು, ಊಟ ತಯಾರಿಗೆ ಮಳೆನೀರೇ. ಮಕ್ಕಳು, ನಾವು, ಎಲ್ಲರೂ ಇದನ್ನು ನೆಚ್ಚೊಂಡಿದ್ದೀವಿ. ಮಿನರಲ್ ನೀರಿಗಿಂತ ಕಮ್ಮಿಯೇನಲ್ಲ' ಎನ್ನುತ್ತಾರೆ ಮಲ್ಲೇಶಪ್ಪ.

ಮಳೆಕೊಯ್ಲಿನ ಈ ಸರಳತೆಯೇ ಮಲ್ಲೇಶಪ್ಪನವರಿಗೆ ಕೊರಗು ಹುಟ್ಟಿಸಿದ್ದು. ಅವರ ಮಾತುಗಳಲ್ಲೇ ಕೇಳಿ: 'ಇಲ್ಲಿಗೆ ಬರುವ ಮೂರು ವರ್ಷ ಹಿಂದೆ ಮನೆ ಕಟ್ಟಿಸಿಕೊಂಡಿದ್ದೆ. ಹಿಂದೆ ಈ ಶಾಲೆಯನ್ನು ಒಮ್ಮೆ ನೋಡಿದ್ದರೂ, ನಾನೂ ಮನೆಯ ಕೆಳಗೇನೇ ಮಳೆನೀರ ತೊಟ್ಟಿ ಮಾಡಿಕೊಳ್ಳಬಹುದಿತ್ತು. ಮನೆಯಲ್ಲೂ ಮಳೆನೀರಿನ ಆನಂದ ಸಿಗ್ತಿತ್ತು.''

4 ಮತ್ತು 5ನೇ ತರಗತಿಯ ಕೆಳಗೇನೇ ಇದೆ ಟಾಂಕಿ. ಪ್ರತಿದಿನ ಇದರಿಂದ 40–50 ಲೀಟರ್ ಬಳಕೆಯಾಗುತ್ತಿದೆ. ತರಗತಿ ಕೋಣೆಯಲ್ಲೇ ನೀರೆತ್ತುವ ಕೈಪಂಪು. ಒಬ್ಬನೇ ಎಳೆಯ ಜಗ್ಗಿದರೂ ನೀರು ಹೊರಹೊಮ್ಮುತ್ತದೆ.

''ಮಳೆನೀರು ಕುಡಿದರೆ ಸೀನು, ಕೆಮ್ಮು ಬರುತ್ತದೆ ಎನ್ನುತ್ತಾರೆ ಜನ. ಇದು ನೂರಕ್ಕೆ ನೂರು ಸರಿಯಲ್ಲ. ನನಗೇ ಬೇರೆ ಶಾಲೆಯಲ್ಲಿದ್ದಾಗ ಇದ್ದ ಇಂಥ ಸಮಸ್ಯೆ ಇಲ್ಲಿನ ಮಳೆನೀರು ಸೇವನೆಯಿಂದ ಮಾಯವಾಗಿದೆ'' ಎಂದು ಮಲ್ಲೇಶಪ್ಪ ಸಂತಸದಿಂದ ತಿಳಿಸುತ್ತಾರೆ.

ಮಕ್ಕಳು ಈ ನೀರನ್ನು ತುಂಬ ಮೆಚ್ಚಿಕೊಂಡಿದ್ದಾರೆ. ಕೆಲವರು ಶಾಲೆಗೆ ಬರುವಾಗ ಜತೆಯಲ್ಲೇ ಖಾಲಿ ಬಾಟ್ಲಿಯನ್ನೂ ತರುತ್ತಾರೆ. ಸಂಜೆ ಮಳೆನೀರು ತುಂಬಿಸಿ ಒಯ್ಯುತ್ತಾರೆ.

ಅನಂತರ ಮಲ್ಲೇಶಪ್ಪನವರೂ ತಮ್ಮ ಮನೆಯ ಹತ್ತಿರವೇ ಮಳೆನೀರ ತೊಟ್ಟಿ ಕಟ್ಟಿಸಿಕೊಂಡಿದ್ದಾರೆ. ಮನೆ ಕಟ್ಟುವಾಗಲೇ ಗೊತ್ತಾಗಿದ್ದರೆ, ಕೆಳಗೇನೇ ಕಟ್ಟಿದ್ದರೆ ಮನೆ ತುಂಬಾ ತಂಪಾಗಿರುತ್ತಿತ್ತು – ಮನಸ್ಸು ಕೂಡಾ.

ಹೆಬ್ಬಳ್ಳಿ ಶಾಲೆಯ ಶಾಲಾ ಅಧ್ಯಾಪಕರಿಗೆ 'ಗಂಗಮ್ಮನ ಕೋಣೆ'ಯ ಮೇಲಿನ 4–5ರ ತರಗತಿ ಅಚ್ಚುಮೆಚ್ಚು. ಸ್ವಲ್ಪ ಬಿಡುವು ಸಿಕ್ಕರೂ ಹೋಗಿ ಕೂರುವುದು ಅಲ್ಲೇ. 'ಸಾರ್, ಏಸಿ ರೂಮ್ ಇದ್ದಂಗಿರ್ತದೆ' ಎನ್ನುತ್ತಾರೆ.

ಶಾಲೆಗೇ ಒಂದು ಬೋರ್‌ವೆಲ್ ಇದೆ. ಅದರ ಕಿಂಚಿತ್ ನೀರನ್ನು ಶಾಲಾವನಕ್ಕೆ, ಪಾತ್ರೆ ಮತ್ತು ಕೈ ತೊಳೆಯಲು ಬಳಸುತ್ತಿದ್ದರು. ಹೋದ ವರ್ಷದಿಂದ ಅದೂ ಬತ್ತಿಹೋಗಿದೆ. ಊರ ಕತೆ ಇನ್ನೂ ಬೇಸರದ್ದು.

ಹೆಬ್ಬಳ್ಳಿ 400–500 ಮನೆಗಳ ಗ್ರಾಮ. ಊರಿನ ಬೋರ್‌ವೆಲ್ಲುಗಳಲ್ಲಿ ಹತ್ತರಲ್ಲಿ ಒಂದರಲ್ಲಿ ಕಾಲಿಂಚು, ಅರ್ಧ ಇಂಚು ನೀರಿದೆ. ಪಂಚಾಯತು ಮೂರು ಕಿಲೋಮೀಟರ್ ದೂರದ ಕೊಳವೆಬಾವಿಗಳಿಂದ ನೀರೆತ್ತಿ ತಂದುಕೊಡುತ್ತಿದೆ.

ಹಿಂದಿನ ಮುಖ್ಯೋಪಾಧ್ಯಾಯ ಶಿವಲಿಂಗಮೂರ್ತಿ ಮಳೆಕೊಯ್ಲಿನ ಬಗ್ಗೆ ತೆಗೆದುಕೊಂಡ ಶ್ರಮವನ್ನು ದೇವರಾಜ್ ಶ್ಲಾಘಿಸುತ್ತಾರೆ. ಸರಕಾರಿ ವ್ಯವಸ್ಥೆಯಲ್ಲಿ ಈ ಪ್ರಯೋಗ ಮಾಡಲು ಬೇಕಾದ ಕಾಗದಪತ್ರ ಹೊಂದಾಣಿಸಿಕೊಳ್ಳಲೂ ವಿಶೇಷ ಯತ್ನ ಮಾಡಿದ್ದರು. ನೈರ್ಮಲ್ಯ, ನಿರ್ವಹಣೆಗಳ ವಿಚಾರದಲ್ಲಿ ಅವರು ಸದಾ ಎಚ್ಚರ ಇಟ್ಟುಕೊಳ್ಳುತ್ತಿದ್ದರು. ಈಗಲೂ ಪ್ರತಿ ವರ್ಷ ಟಾಂಕಿ, ಶೋಧಕಗಳನ್ನು ಶುಚಿಗೊಳಿಸಿ ಸುಣ್ಣ ಬಳಿಯುತ್ತಾರೆ. ಹೀಗೆ ಮಾಡುವ ಹೊತ್ತಿನಲ್ಲಿ ಒಳಗೆ ಇನ್ನೂ ಮಿಗತೆ ನೀರಿರುತ್ತದೆ. 'ಊರಿನ ಎಲ್ಲಾ ಮನೆಗಳಲ್ಲೂ ಇಂತಹ ತೊಟ್ಟಿ ಮಾಡಿಸಿಕೊಂಡರೆ ವರ್ಷಾರ್ಧದ ಉಪಯೋಗಕ್ಕಂತೂ ಅದುವೇ ಸಾಕು' ಎಂದು ಮಲ್ಲೇಶಪ್ಪ ಹೆಮ್ಮೆಯಿಂದ ನುಡಿಯುತ್ತಾರೆ.

ಎಂ.ಬಿ.ಗುರುದೇವ್ ಸಂಪರ್ಕ: **97422 02650**
ಟಿ. ಮಲ್ಲೇಶಪ್ಪನವರ ಸಂಪರ್ಕ: **99008 61485**